ಚಾರಕ್ಕೆಂದು ಹೊರಟ್ಟಿದ್ದಾಗ ನಲವತ್ತೊಂದು ತಿಂಗಳ ಮಗ ಕಬೀರ, ''ನಾನೂ ಬರುತ್ತೇನೆ'' ಎಂದು ಹಟಹಿಡಿದ. ಮನೆಯಲ್ಲಿ ಇದ್ದಿದ್ದೂ ಬೋರಾಗುವ ಈ ವಯಸ್ಸಿನ ಮಕ್ಕಳು ಹೀಗೆ ಒಂದು ಜಾಲಿ ರೈಡ್ ಕೇಳೇ ಕೇಳುತ್ತಾರೆ. ಯಾರೇ ಮನೆಯಿಂದ ಹೊರಗೆ ಹೋಗುವ ಸೂಚನೆ ಸಿಕ್ಕರೂ ಸಾಕು, ತಾವೇ ಸಿಕ್ಕ ಚಪ್ಪಲಿ ಮೆಟ್ಟಿಕೊಂಡು ಸಿದ್ಧವಾಗಿ ನಿಂತು ಬಿಡುತ್ತವೆ. ಕೊನೆಗೆ ಆ ಚಪ್ಪಲಿ ಕೂಡ ಅವರದ್ದಾಗಿರಲ್ಲ. ಅಳತೆ ಮೀರಿದ ದೊಡ್ಡ ಸೈಜಿನ, ಸಿಕ್ಕ ಚಪ್ಪಲಿಗಳನ್ನು ಅದಲು ಬದಲಾಗಿ ಹಾಕಿಕೊಳ್ಳುತ್ತವೆ. ಇಂತಹ ಅಪರೂಪದ ಕೆಲಸಗಳನ್ನು ಮುಗ್ಧ ಮಕ್ಕಳಷ್ಟೇ ಮಾಡಲು ಸಾಧ್ಯ. ಈ ವಿಷಯದಲ್ಲಿ ಪ್ರಪಂಚದ ಮಕ್ಕಳಿಗೆಲ್ಲಾ ಪ್ರಕೃತಿ ಏಕರೂಪದ ಪಾಠವನ್ನೇ ಮಾಡಿಬಿಟ್ಟಿದೆ.

ನಮ್ಮಪ್ಪ ಸಂತೆಗೆ, ಉರುಸಿಗೆ, ನಿಖಾಃಗೆ, ಕೊನೆಗೆ ಯಾವುದೇ ಸುಡುಗಾಡಿಗೆ ಹೊರಟು ನಿಂತರೂ ನಾನೂ ಹೀಗೆ ಮೊಂಡು ಹಿಡಿದ ಗಿರಾಕಿ. ಆಗ ನನಗೆ ಚಪ್ಪಲಿ ಕೂಡ ಇರಲಿಲ್ಲ. ಅಪ್ಪ ಟೈರಿನ ಅಟ್ಟೆ ಇಡಿಸಿ ಹೊಲಿಸಿದ ಒರಟು ಚಪ್ಪಲಿಗಳನ್ನು ತೆಗೆಯಲಾಗದಷ್ಟು ಆತ ಬಿಝೀ ಆಗಿರುತ್ತಿದ್ದ. ಒಮ್ಮೊಮ್ಮೆ ಆತ ಅದನ್ನು ತನ್ನ ಕಾಲಿಗಿಟ್ಟೇ ಹೊಲಿಸಿಕೊಂಡಿರುವಂತೆ ನನಗೆ ಭಾಸವಾಗುತ್ತಿತ್ತು.

ಅಪ್ಪ ಎತ್ತಿನ ಗಾಡಿಕಟ್ಟಿ ಹತ್ತಿ ಕೂರುವುದೇ ತಡ, ನಾನು ಚಕ್ರದ ಮೂಲಕ ಹತ್ತಿ, ಗಾಡಿಯೊಳಗೆ ಒಕ್ಕರಿಸಿ ಬಿಡುತ್ತಿದ್ದೆ. ಆತನಿಗೆ ನನ್ನ ಕರೆದ್ಯೊಯ್ಯುವ ಮನಸ್ಸು ಖಂಡಿತಾ ಇರುತ್ತಲೇ ಇರಲಿಲ್ಲ. ಯಾಕೆಂದು ನಾನೂ ತಲೆಕೆಡಿಸಿಕೊಳ್ಳುವಷ್ಟು ದೊಡ್ಡವನೂ ಆಗಿರಲಿಲ್ಲ. ಚಂಡಿಹಿಡಿದು ಬಾರುಕೋಲಲ್ಲಿ ಲಾತ ಕೂಡ ತಿನ್ನುತ್ತಿದ್ದೆ. ಇಷ್ಟಾದರೂ ಕಾಡಿಬೇಡಿ, ಗೋಗೆರೆದು, ಕ್ಯಾಕರಿಸಿ ಉಗಿಸಿಕೊಂಡು, ಹೋದಲ್ಲಿ ಹೋಗಿ, ಅಲ್ಲೂ ಸತಾಯಿಸಿ ಮತ್ತೆ ಎರಡನೇ ಸುತ್ತಿನ ಒದೆಗಳ ಕಾಣಿಕೆಯಾಗಿ ಸ್ವೀಕರಿಸುವಷ್ಟು ಒಳ್ಳೆಯವನಾಗಿದ್ದೆ.

ಇವತ್ತು ಈ ನನ್ನ ಬಾಲ್ಯದ ನೆನಪುಗಳ ಪರಪರ ಕೆದಕಿದ ಮಗ ಅದೇ ಪ್ರಕಾರ ಬೇಡವೇ ಬೇಡ ಎಂದರೂ ಒಪ್ಪದೆ ಸಿಡಿದೆದ್ದ. ಪ್ರಜ್ಞೆ ತಪ್ಪಿದವನ ರೀತಿ ನೆಲಕ್ಕೆ ಪುಸಕ್ಕನೆ ಜಾರಿದ. ಕತ್ತೆಮರಿ ಬೂದಿಗುಡ್ಡೆಯಲ್ಲಿ ಉರುಳಾಡುವಂತೆ ರಸ್ತೆಯ ಮೇಲೆ ಬಿದ್ದು ನಾಗನರ್ತನ ಮಾಡಿದ. ತೆಗೆದು ಬಾರಿಸಿಬಿಡಬೇಕು ಎನ್ನುವಷ್ಟು ಪಿತ್ತ ತಲೆಗೆ ಏರಿದರೂ ದಾರಿಯಲ್ಲಿನ ಜನ ನೋಡಿ ಮುಜುಗರಕ್ಕೆ ಬಿದ್ದೆ. ಇದೇ ನನ್ನಪ್ಪ ಆಗಿದ್ದರೆ ಯಾವ ಸಂಕೋಚವೂ ತೋರದೆ ಫಟಾರೆಂದು ಬಾರಿಸುತ್ತಿದ್ದ. ಆಧುನಿಕ ಅಪ್ಪನಾದ ನಾನು ಎದುರಿಗಿದ್ದ ಹೆಂಡತಿಯ ಮುಖ ನೋಡಿದೆ. ಆಕೆ, 'ಏನು, ಮಕ್ಕಳ ನಾನೊಬ್ಬಳೇ ಸಾಕುತ್ತೇನೆಂದು ವಾಗ್ದಾನ ಮಾಡಿದ್ದೇನಾ? ಅವನ ಹಟವೇ ನನ್ನದು ಕೂಡ. ಮುಚ್ಕೊಂಡು ಕರ್ಕೊಂಡು ಹೋಗು' ಎನ್ನುವಂತೆ ಗುರಾಯಿಸಿದಳು.

ಬೇರೆ ದಾರಿಯಿಲ್ಲದೆ, ''ಬಾ ಹಾಳಾದೋನೆ, ಬಂದಿಲ್ಲಿ ಸಾಯಿ. ಅಲ್ಲಿ ಕಟ್ಟಿಂಗ್ ಶಾಪಲ್ಲಿ ಸಣ್ಣ ಕೂದಲು ನಿನಗೂ ಹತ್ತುತ್ತೆ, ಹಂಗಾಗಿ ಬ್ಯಾಡ ಕಣೋ ಅಂದ್ರೂ ಅರ್ಥಾನೆ ಮಾಡ್ಕೊಳ್ಳದ ಶನಿ ನೀನು'' ಎಂದು ದಬಾಯಿಸಿದೆ. ನನ್ನ ಗದರಿಕೆ ಮಾತುಗಳು ನನ್ನಲ್ಲೇ ಉಳಿದು ಹೋದವು. ನನ್ನ ಪಿಳ್ಳೆ ಅದನ್ನು ಕಿಂಚಿತ್ತೂ ಕೇಳಿಸಿಕೊಳ್ಳಲಿಲ್ಲ. ಬಾ ಎಂಬ ಹಸಿರು ಸಿಗ್ನಲ್ ಬೀಳುತ್ತಲೇ ಓಡಿ ಬಂದು ಸ್ಕೂಟರ್ ಹ್ಯಾಂಡೆಲ್ ಹಿಡಿದು ನಿಂತೇ ಬಿಟ್ಟ. ಹಲ್ಲುಗಿಂಜುತ್ತಾ, ಪಿಂಯ್ಯೋ... ಪಿಂಯ್ಯೋ... ಎನ್ನುವ ಕರ್ಕಶವಾದ ಹಾರನ್ ಒತ್ತುತ್ತಾ ನಿಂತ. ಅದವನಿಗೆ ಎಂದೆಂದೂ ಬಲು ಇಷ್ಟದ ಕೆಲಸ.

ಎಲ್ಲರ ಮನೆಯ ಮಕ್ಕಳೂ ಹೀಗೆ ಇರಬಹುದೇನೋ? ಮನೆಯಿಂದ ಸೈಕಲ್ ಇಲ್ಲವೇ ಸ್ಕೂಟರು ಹೊರಟು ನಿಂತರೆ ಹೀಗೆ 'ನಾವೂ ಬರುತ್ತೇವೆ' ಎಂದು ಬೆನ್ನಿಗೆ ಬೀಳುವುದು ತಲೆತಲಾಂತರದಿಂದ ಒಲಿದು ಬಂದ ವಿದ್ಯೆ ಇರಬೇಕು. ಅಲ್ಲದೆ, ಏನೇನೂ ಅರಿಯದ ಮಕ್ಕಳಿಗೆ ಈ ದುಶ್ಚಟವನ್ನೂ ನಾವೇ ಕಲಿಸಿರುತ್ತೇವೆ ಎಂಬ ಸಂಗತಿಯನ್ನೂ ಮಳ್ಳರಾದ ನಾವು ಮರೆತೇ ಬಿಟ್ಟಿರುತ್ತೇವೆ.

ಒಮ್ಮೆ ಹೀಗೆ ಹತ್ತಿ ನಿಂತವನು ದೊಡ್ಡದೊಂದು ಅನಾಹುತವನ್ನೂ ಮಾಡಿದ್ದ. ಅದೂ ಕೆಲವೇ

